ಜೊಲ್ಲೆ ಗ್ರುಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ಅಗಸ್ಟ 2025–ಸಂಪುಟ–9 ಸಂಚಿಕೆ–08

# ದರ್ಪಣ



## ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜು ನಿಪ್ಪಾಣಿ.

## ಓರಿಯೆಂಟೇಶನ್ ಹಾಗೂ ಸ್ವಾಗತ ಸಮಾರಂಭ

ಯಕ್ಸಂಬಾ ಪಟ್ಟಣದ ಬೀರೇಶ್ವರ ಭವನದಲ್ಲಿ ನಡೆದ ಸನ್ 2025–26 ನೇ ಸಾಲಿನ ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ವಸತಿ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯ ನಿಪ್ಪಾಣಿಯ ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಓರಿಯೆಂಟೇಶನ್ ಹಾಗೂ ಸ್ವಾಗತ ಸಮಾರಂಭ ಕಾರ್ಯಕ್ರಮವನ್ನು ಮುಖ್ಯ ಅತಿಥಿಗಳ ಸ್ಥಾನವನ್ನು ಅಲಂಕರಿಸಿದ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಮಾಜಿ ಉಪಕುಲಪತಿಗಳಾದ ಡಾ.ಎಸ್ ಜೆ ಗುಡಿಸಿ ಹಾಗೂ ಜೊಲ್ಲೆ ಗ್ರೂಪ್ ಉಪಾಧ್ಯಕ್ಷರಾದ ಶ್ರೀ ಬಸವಪ್ರಸಾದ ಜೊಲ್ಲೆ ದೀಪ ಪ್ರಜ್ವಲನೆ ಮೂಲಕ ಚಾಲನೆ ನೀಡಿದರು.

ಬಸವಪ್ರಸಾದ ಜೊಲ್ಲೆಯವರು ಪ್ರಾಸ್ತಾವಿಕವಾಗಿ ಮಾತನಾಡಿ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಮೂಲಭೂತ ಸೌಕರ್ಯ ಹೊಂದಿದ ಉತ್ತರ ಕರ್ನಾಟಕದಲ್ಲಿಯೇ ಒಂದು ಮಾದರಿ ವಿದ್ಯಾ ಸಂಸ್ಥೆಯನ್ನಾಗಿಸುವ ಉದ್ದೇಶವನ್ನು ಸಂಸ್ಥೆಯು ಹೊಂದಿದೆ ಎಂದರು.

ಅದೇ ರೀತಿ ಅತಿಥಿಗಳಾಗಿ ಆಗಮಿಸಿದ ಡಾ.ಎಸ್ ಜೆ ಗುಡಿಸಿ ಮಾತನಾಡಿ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳ ಭಾವಿ ಭವಿಷ್ಯಕ್ಕಾಗಿ ಇಂತಹ ಮೂಲಭೂತ ಸೌಕರ್ಯಗಳುಳ್ಳ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಕರೆ ನೀಡಿದರು. ಮಕ್ಕಳ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಜೊಲ್ಲೆ ಎಜ್ಯುಕೇಶನ್ ಸೊಸಾಯಟಿ ಸದಾ ಕಾರ್ಯೋನ್ಮುಖವಾಗಿದೆ ಎಂದು ಪ್ರಶಂಸಿದರು.

ಸಂಸ್ಥೆಯು ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಮಾತನಾಡಿ ಸಂಸ್ಥೆ ಬೆಳವಣಿಗೆಯಲ್ಲಿ ಪಾಲಕರ ಸಲಹೆ ಸೂಚನೆಗಳು ಅಗತ್ಯ. 10ನೇ ವರ್ಗದಲ್ಲಿ ಎಲ್ಲ ಪಾಲಕರು ತಮ್ಮ ಮಕ್ಕಳ ಕುರಿತು ವಿಶೇಷ ಕಾಳಜಿ ವಹಿಸುವರು. ಆದರೆ ಅದೇ ಕಾಳಜಿ ಪಿಯುಸಿ ಹಂತದಲ್ಲಿ ಆಗದೆ ಇದ್ದಿದ್ದರಿಂದ ಇವತ್ತು ಪಿಯುಸಿ ಹಂತದಲ್ಲಿ ವಿದ್ಯಾರ್ಥಿಗಳ ಪ್ರದರ್ಶನ ಕಳಪೆ ಮಟ್ಟದಲ್ಲಿ ಕಾಣುತ್ತಿದೆ. ಆದ್ದರಿಂದ ಪಿಯುಸಿ ಹಂತದಲ್ಲಿ ಪಾಲಕರಾದವರು ಮಕ್ಕಳ ಕುರಿತು ವಿಶೇಷ ಕಾಳಜಿ ವಹಿಸಿದ್ದೇ ಆದರೆ ಮಕ್ಕಳ ಜೀವನದಲ್ಲಿ ಈ ಹಂತವು ಬದಲಾವಣೆಯ ಬುನಾದಿಯಾಗಲಿದೆ ಎಂದು ಪಾಲಕರಿಗೆ ತಿಳಿಸಿದರು. ವಿದ್ಯಾರ್ಥಿಗಳೆ ಪಿ.ಯು.ಸಿ. ಅನ್ನುವುದು ಒಂದು ಸುವರ್ಣ ಅವಕಾಶ ಇದನ್ನು ಅನುಭವಿಸಿ ಆನಂದಿಸಿ ಎಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ನಿಪ್ಪಾಣಿಯ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಮಾತನಾಡಿ ನಮ್ಮ ಗ್ರಾಮೀಣ ಕ್ಷೇತ್ರದ ಪಾಲಕರು ಪಿ.ಯು. ಶಿಕ್ಷಣಕ್ಕಾಗಿ ಮಂಗಳೂರು, ಬೆಂಗಳೂರು, ಮೂಡಬಿದರೆ, ಬೇರೆ ಬೇರೆ ನಗರಗಳಿಗೆ ಮಕ್ಕಳನ್ನು ಕಳುಹಿಸುತ್ತಾರೆ. ಆದರೆ ಅಲ್ಲಿನ ಹವಾಮಾನ, ಊಟದ ಪದ್ಧತಿ, ಆಡುವ ಭಾಷೆ ನಮ್ಮ ಮಕ್ಕಳಿಗೆ ಆಗುವುದಿಲ್ಲ. ಈ ಉದ್ದೇಶದಿಂದ ಸಂಸ್ಕಾರದೊಂದಿಗೆ ಶಿಕ್ಷಣ ಎಂಬ ಧ್ಯೇಯದೊಂದಿಗೆ ಇಂದಿನ ಸ್ಪರ್ಧಾತ್ಮಕ ಯುಗದ ಮಹತ್ವವನ್ನು ಅರಿತು ಪಿ.ಯು.ಸಿ ವಿದ್ಯಾರ್ಥಿಗಳಿಗೆ ಬೋರ್ಡ್ ಪರೀಕ್ಷೆಯ ತಯಾರಿ ಜೊತೆಗೆ ಜೆಇಇ, ನೀಟ್, ಕೆ–ಸಿ,ಇ,ಟಿ ಯಂತಹ ಪರೀಕ್ಷೆಗಳಿಗೆ ಗುಣಮಟ್ಟದ ತರಬೇತಿ ನೀಡಿ ಅವರ ಗುರಿ ಮುಟ್ಟಿಸುವ ಕಾರ್ಯಕ್ಕೆ ಜೊಲ್ಲೆ ಸಂಸ್ಥೆ ಬದ್ಧವಾಗಿದೆ. ಅಭ್ಯಾಸದೊಂದಿಗೆ ಯೋಗ, ಧ್ಯಾನ, ಗುರುಕುಲಪದ್ಧತಿ, ಭಾರತೀಯ ಸಂಸ್ಕೃತಿಯನ್ನು ಪ್ರೇರೇಪಿಸುವ ಚಟುವಟಿಕೆಗಳು ಈ ಸಂಸ್ಥೆಯ ವಿಶೇಷವಾಗಿವೆ.

ಇದೇ ವೇಳೆ ಶ್ರೀಮತಿ ಶಶಿಕಲಾ ಜೊಲ್ಲೆ ಶಿಷ್ಯವೇತನ ಪಡೆದ ಸುಮಾರು 20 ವಿದ್ಯಾರ್ಥಿಗಳಿಗೆ ಒಟ್ಟು 60 ಲಕ್ಷ 40 ಸಾವಿರ ರೂಗಳ ಚೆಕ್ ಹಾಗೂ ಪ್ರಮಾಣ ಪತ್ರ ವಿತರಿಸಿ ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆ ಅಧ್ಯಕ್ಷರಾದ ಶ್ರೀ ಜ್ಯೋತಿಪ್ರಸಾದ ಜೊಲ್ಲೆ, ಸಂಯೋಜಕರಾದ ಶ್ರೀ ಎಮ್ ಎಮ್ ಪಾಟೀಲ, ಪ್ರಾಚಾರ್ಯರಾದ ಶ್ರೀ ದೀಪಕ ಪಾಟೀಲ ಹಾಗೂ ಎಲ್ಲ ಅಂಗ ಸಂಸ್ಥೆಗಳ ಪ್ರಾಚಾರ್ಯರು ಉಪಸ್ಥಿತರಿದ್ದರು.



**ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಯಕ್ಸಂಬಾ ಹಾಗೂ ಬಸವಜ್ಯೋತಿ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಕಾಲೇಜು, ಯಕ್ಸಂಬಾ**

# ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಮತ್ತು ನೂತನ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ

ಸನ್ 2025–26ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಮತ್ತು ನೂತನ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಯಕ್ಸಂಬಾದ ಶ್ರೀ ಬೀರೇಶ್ವರ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮವನ್ನು ದೀಪ ಪ್ರಜ್ವಲನೆ ಮೂಲಕ ಕಾರ್ಯಕ್ರಮದ ಮುಖ್ಯ ಅತಿಥಿ ಸ್ಥಾನವನ್ನು ಅಲಂಕರಿಸಿ ಕೊಂಡಿರುವ ಆರ್ ಎಮ್ ಮಠದ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು ಉಪನಿರ್ದೇಶಕರ ಕಾರ್ಯಾಲಯ, ಚಿಕ್ಕೋಡಿ ಚಾಲನೆ ನೀಡಿದರು. ಪ್ರಮುಖ ಉಪಸ್ಥಿತಿ ವಹಿಸಿದ ಜೊಲ್ಲೆ ಗ್ರೂಪ್ ಉಪಾಧ್ಯಕ್ಷರಾದ ಬಸವಪ್ರಸಾದ ಜೊಲ್ಲೆ ಮಾತನಾಡಿ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಿ ಸಮಾಜದ ಎಲ್ಲ ವರ್ಗದ ಜನರಿಗೆ ಕೈಗೆಟುಕುವ ಶುಲ್ಕದಲ್ಲಿ ಶಿಕ್ಷಣ ನೀಡುವುದು ಜೊಲ್ಲೆ ಎಜ್ಯುಕೇಶನ್ ಸೊಸಾಯಟಿಯ ಉದ್ದೇಶವಾಗಿದೆ. ಅದಕ್ಕೋಸ್ಕರ ಶಿಕ್ಷಣದಲ್ಲಿ ವಿನೂತನ ಯೋಜನೆಗಳನ್ನು ರೂಪಿಸುತ್ತಾ ಸಂಸ್ಥೆಯು ಇವತ್ತು ಸಮಾಜದ ಸಹಕಾರದೊಂದಿಗೆ ಹೆಮ್ಮರವಾಗಿ ಬೆಳೆಯುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಮುಖ್ಯ ಅತಿಥಿ ಸ್ಥಾನವನ್ನು ಅಲಂಕರಿಸಿದ ಉಪನಿರ್ದೇಶಕರ ಕಾರ್ಯಾಲಯ, ಚಿಕ್ಕೋಡಿ ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿಗಳಾದ ಆರ್ ಎಮ್ ಮಠದ ಮಾತನಾಡಿ ಗ್ರಾಮೀಣ ಮಟ್ಟದಲ್ಲಿ ಸಂಸ್ಥೆಯು ಹೆಮ್ಮರವಾಗಿ ಬೆಳೆದು ಸಾವಿರಾರು ವಿದ್ಯಾರ್ಥಿಗಳಿಗೆ ಪಟ್ಟಣದ ಮಾದರಿಯಲ್ಲಿ ಸುಸಜ್ಜಿತ ಕಟ್ಟಡ ಹಾಗೂ ಸಕಲ ಸೌಲಭ್ಯಗಳೊಂದಿಗೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಜೊಲ್ಲೆ ಎಜ್ಯುಕೇಶನ್ ಸೊಸಾಯಟಿಯ ಪಾತ್ರ ಅತಿ ಮುಖ್ಯ ಎಂದು ಪ್ರಶಂಶಿಸಿದರು. ಶಿಕ್ಷಣವು ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ಪಾತ್ರವಹಿಸಬೇಕು, ಶಿಕ್ಷಕರಾದವರು ಪಠ್ಯದ ಜೊತೆಗೆ ಸಹಪಠ್ಯ ಚಟುವಟಿಕೆಗಳನ್ನು ಕೂಡಾ ನಿರಂತರ ಬೋಧಿಸುವುದರಿಂದ ಇದು ಸಾಧ್ಯ ಎಂದರು. ಅದೇ ರೀತಿ ಮಾನಸಿಕವಾಗಿ ಸದೃಢವಾಗುವುದರ ಜೊತೆಗೆ ದೈಹಿಕವಾಗಿಯೂ ಕೂಡ ಸದೃಢವಾಗಬೇಕಾದರೆ ನಮ್ಮ ಆಹಾರ ಪದ್ಧತಿ ಮತ್ತು ಜೀವನ ಶೈಲಿಯನ್ನು ಬದಲಾಯಿಸುವಂತೆ ಕರೆ ನೀಡಿದರು. ವಿದ್ಯಾರ್ಥಿಗಳು ಯಶಸ್ಸನ್ನು ಸಾಧಿಸಲು ನಿರಂತರ ಓದು, ನಿರ್ದಿಷ್ಟವಾದ ಗುರಿ ಹಾಗೂ ದೃಢವಾದ ಆತ್ಮವಿಶ್ವಾಸ ಇಟ್ಟುಕೊಂಡು ನಾನು ಜಯಿಸಬಲ್ಲೆ ಎಂದು ಧನಾತ್ಮಕವಾಗಿ ಸದಾ ಮುನ್ನುಗ್ಗುತ್ತಿರಬೇಕು, ಶಿಕ್ಷಕರು ಕೇವಲ ಪಠ್ಯವನ್ನು ಮಾತ್ರ ಬೋಧಿಸದೆ ಮಗು ಸಮಾಜದಲ್ಲಿ ಬದುಕುವ ಕಲೆಯನ್ನು ಕೂಡ ಕಲಿಸಬೇಕು ಒಟ್ಟಿನಲ್ಲಿ ಪ್ರತಿಮಗು ಸಮಾಜಮುಖಿಯಾಗಿ ಬೆಳೆಯಬೇಕು ಎಂದರು.

ವೇದಿಕೆಯ ಮೇಲಿನ ಗಣ್ಯರು ನೂತನವಾಗಿ ದಾಖಲಾತಿ ಹೊಂದಿದ ಮಕ್ಕಳಿಗೆ ಸಸಿಗಳನನ್ನು ನೀಡುವುದರ ಮೂಲಕ ಸ್ವಾಗತಿಸಿಕೊಂಡರು. ಶಿವಶಂಕರ ಜೊಲ್ಲೆ ಕನ್ನಡ ಶಾಲೆಯ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಿಗೆ ಜವಾಬ್ದಾರಿಯನ್ನು ನೀಡಿದರು. ಬಸವಜ್ಯೋತಿ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಸುಧಾಕರ ಕಾಮನಗೋಳ ಎಇಇ ಪರೀಕ್ಷೆಯಲ್ಲಿ ಪ್ರತಿಶತ 99% ಹಾಗೂ KCET ಪರೀಕ್ಷೆಯಲ್ಲಿ ಅಥರ್ವ ಅಡಕೆ ಇಂಜಿನಿಯರ್ ವಿಭಾಗದಲ್ಲಿ 8574 ರ್ಯಾಂಕಿಂಗ್ ಪಡೆದದಕ್ಕಾಗಿ ಸಂಸ್ಥೆಯ ಪರವಾಗಿ ಅಭಿನಂದಿಸಿ ಸತ್ಕರಿಸಲಾಯಿತು. ಅದೇ ರೀತಿ ಅಂಗ ಸಂಸ್ಥೆಗಳ ವಿದ್ಯಾರ್ಥಿಗಳಿಂದ ಜರುಗಿದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ಕೊಟ್ಟವು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಜ್ಯೋತಿಪ್ರಸಾದ ಜೊಲ್ಲೆ ವಹಿಸಿಕೊಂಡಿದ್ದರು. ನಿರ್ದೇಶಕರಾದ ಸುಜಾತಾ ಕಬಾಡೆ, ಲತಾ ವಾಳಕೆ, ಸಂಸ್ಥೆಯ ಸಂಯೋಜನಾಧಿಕಾರಿಗಳಾದ ಎಮ್. ಎಮ್. ಪಾಟೀಲ ಹಾಗೂ ವಿವಿಧ ಅಂಗಸಂಸ್ಥೆಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯರಾದ ವ್ಹಿ. ಆರ್. ಭಿವಸೆ ಸ್ವಾಗತಿಸಿದರು ಪ್ರಾಚಾರ್ಯರಾದ ಸಿ.ಪಿ.ಬನ್ನಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮವನ್ನು ಉಪನ್ಯಾಸಕರಾದ ಸ್ನೇಹಾ ಕಾಂಬಳೆ ಮತ್ತು ಸ್ವಪ್ನಾ ವಾಳಕೆ ನಿರೂಪಿಸಿ ವಂದಿಸಿದರು.









# ಸುಧಾ ಮೂರ್ತಿ

ಜೀವನದಲ್ಲಿ ಐಷಾರಾಮ ಇರಬೇಕು, ಎನ್ನುವುದು ಕೆಲವರ ವಾದವಾದರೆ ಇನ್ನೂ ಕೆಲವರು ತಮ್ಮ ಜೀವನವು ತುಂಬಾ ಸರಳವಾಗಿರಬೇಕು ಎಂದು ಬಯಸುವರು ಆದರೆ ಸರಳ ಜೀವನ ನಡೆಸುವುದು ಅಷ್ಟು ಸುಲಭದ ಮಾತಲ್ಲ. ಇದು ಪ್ರತಿಯೊಬ್ಬರಿಗೆ ಪಾಲಿಸಿಕೊಂಡು ಹೋಗಲು ಆಗದು. ಜೀವನದಲ್ಲಿ ತುಂಬಾ ಸರಳವಾಗಿರುವುದು ಕೆಲವು ವ್ಯಕ್ತಿಗಳನ್ನು ನೋಡಿ ಕಲಿಯಬೇಕಾಗುತ್ತದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ನಮ್ಮೆಲ್ಲರ ನೆಚ್ಚಿನ "ಸುಧಾ ಮೂರ್ತಿ"ಯವರು.

ಸರಳತೆಯೇ ಇವರ ಜೀವನದ ಆಸ್ತಿ. ಆಗರ್ಭ ಶ್ರೀಮಂತಿಕೆ ಇದ್ದರೂ ಕೂಡಾ ಸರಳತೆಯ ಆರಾಧಕಿ ಎಂದೇ ಎಲ್ಲರ ಮನೆ ಮಾತಾಗಿರುವ ನಮ್ಮೆಲ್ಲರ ನೆಚ್ಚಿನ ಸುಧಾಮೂರ್ತಿಯವರು ಹೆಣ್ಣು ಮಕ್ಕಳಿಗೊಂದು ಸ್ಪೂರ್ತಿಯ ಸೆಲೆಯಂದರೆ ತಪ್ಪಾಗಲಾರದು. ಅವರ ಮಾತಿನ ಸ್ಪೂರ್ತಿಯಿಂದಾಗಿ ಎಷ್ಟೋ ಹೆಣ್ಣು ಮಕ್ಕಳು ಇಂದು ತಮ್ಮ ನೆಲೆಯನ್ನು ಕಂಡುಕೊಳ್ಳಲು ಕಾರಣಿಕರ್ತ್ಯರಾಗಿದ್ದಾರೆ.

ಕನ್ನಡ, ಇಂಗ್ಲೀಷ & ಮರಾಠಿ ಬರಹಗಾರ್ತಿಯಾದ ಇವರು ತಮ್ಮ ವೃತ್ತಿಪರ ಜೀವನವನ್ನು ಕಂಪ್ಯೂಟರ ವಿಜ್ಞಾನಿ & ಇಂಜಿನಿಯರಾಗಿ ಆರಂಭಿಸಿದರು. ಇವರು ಈಗ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರು ಹಾಗೂ ಬಿಲ್ ಗೇಟ್ಸ ಪ್ರತಿಷ್ಠಾನದ ಸಾರ್ವಜನಿಕ ಆರೋಗ್ಯ ಉಪಕ್ರಮಗಳ ಸದಸ್ಯರಾಗಿದ್ದಾರೆ.

**ಸುಧಾ ಮೂರ್ತಿಯವರ ಜೀವನ :-**

ಸುಧಾಮೂರ್ತಿಯವರು ಧಾರವಾಡ ಜಿಲ್ಲೆಯ ಶಿಗ್ಗಾಂವ (ಈಗ ಹಾವೇರಿ ಜಿಲ್ಲೆಯಲ್ಲಿದೆ) ಗ್ರಾಮದ ಕುಲಕರ್ಣಿ ಮನೆತನದಲ್ಲಿ 1950ರ ಅಗಷ್ಟ 19 ರಂದು ಜನಿಸಿದರು. ಸುಧಾ ಮೂರ್ತಿಯವರ ತಂದೆ-ರಾಮಚಂದ್ರ ಕುಲಕರ್ಣಿಯವರು ಹುಬ್ಬಳ್ಳಿಯ ಕೆ. ಎಮ್. ಕಾಲೇಜಿನ ಸ್ತ್ರೀ ರೋಗ ತಜ್ಞರು, ಪ್ರಾಧ್ಯಾಪಕರು. ತಾಯಿ-ವಿಮಲಾ ಕುಲಕರ್ಣಿಯವರು ಪದವಿ ಪರೀಕ್ಷೆಯಲ್ಲಿ ಚಿನ್ನದ ಪದಕ ಗಳಿಸಿದ್ದರು. ಈ ದಂಪತಿಗಳಿಗೆ 4 ಜನ ಮಕ್ಕಳು.

**ಶಿಕ್ಷಣ :-**

ಸುಧಾ ಮೂರ್ತಿಯವರು ಪ್ರಾಥಮಿಕ ಮಾಧ್ಯಮಿಕ & ಹೈಸ್ಕೂಲ ವಿದ್ಯಾಭ್ಯಾಸವೆಲ್ಲಾ ಅವರ ಹುಟ್ಟೂರಾದ ಹಾವೇರಿ ಜಿಲ್ಲೆಯ ಶಿಗ್ಗಾಂವನಲ್ಲಿ ನಡೆಯಿತು. 1966ರಲ್ಲಿ ಹುಬ್ಬಳಿಯ ನ್ಯೂ ಎಜ್ಯುಕೇಶನ ಸೊಸೈಟಿಯ ಗರ್ಲ್ಸ್ ಇಂಗ್ಲೀಷ ಸ್ಕೂಲ್ ನಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದರು. 1972ರಲ್ಲಿ ಹುಬ್ಬಳ್ಳಿಯ ಬಿ.ವಿ.ಬಿ. ಕಾಲೇಜ ಆಫ್ ಇಂಜಿನಿಯರಿಂಗ್‌ನಲ್ಲಿ ಇಲೇಟ್ರಿಕಲ್ ಇಂಜಿನಿಯರಿಂಗ ನಲ್ಲಿ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದರು. 1974ರಲ್ಲಿ ಬೆಂಗಳೂರಿನ ಇಂಡಿಯನ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ಕಂಪ್ಯೂಟರ ಸಾಯನ್ಸ್‌ದಲ್ಲಿ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದರು. ಆಗಿನ ಕರ್ನಾಟಕದ ಮುಖ್ಯಮಂತ್ರಿಯಿಂದ ಚಿನ್ನದ ಪದಕವನ್ನು ಪಡೆದರು.

**ವೃತ್ತಿ ಜೀವನ :-**

ಸುಧಾಮೂರ್ತಿ (ಅಗುನ್ನು ಸುಧಾ ಕುಲಕರ್ಣಿ) ಅವರು ಟೆಲ್ಕೊದ ಪುಣೆ, ಮುಂಬಯಿ ಹಾಗೂ ಜಮಶೇಟಪುರ ಶಾಖೆಗಳಲ್ಲಿ ಡೇವಲೊಮೆಂಟ ಇಂಜಿನಿಯರ ಆಗಿ ದುಡಿದಿದ್ದಾರೆ. ಟೆಲ್ಕೊಗೆ ಪ್ರವೇಶ ಪಡೆದ ಪ್ರಥಮ ಮಹಿಳಾ ಇಂಜಿನಿಯರ ಎನ್ನುವ ಹೆಗ್ಗಳಿಕೆ ಇವರದು. ಆ ಬಳಿಕ ಇವರು ಪುಣೆಯ ಬಾಲಚಂದ್ರ ಗ್ರೂಪ ಆಫ್ ಇಂಡಸ್ಟ್ರೀಜ್‌ದಲ್ಲಿ ಕೆಲಕಾಲ ಸೇವೆ ಸಲ್ಲಿಸಿದರು. 1996ರಲ್ಲಿ ತಮ್ಮ ಪತಿ ನಾರಾಯಣ ಮೂರ್ತಿಯವರ ಜೊತೆಗೂಡಿ ಇನ್ಫೋಸಿಸ್ ಫೌಂಡೇಶನ ಪ್ರಾರಂಭಿಸಿದರು.

**ಸಾಹಿತ್ಯ:-**

ಕನ್ನಡ ಕೃತಿಗಳು :- 1) ಹಕ್ಕಿಯ ತೆರದಲ್ಲಿ 2) ಶಾಲಾ ಮಕ್ಕಳಿಗಾಗಿ ಕಂಪ್ಯೂಟರ್ 3) ಡಾಲರ್ ಸೊಸೆ 4) ಮಹಾಶ್ವೇತೆ 5) ಪರಿಧಿ 6) ಮನದ ಮಾತು 7) ಗುಟ್ಟೊಂದು ಹೇಳುವೆ 8) ಯಶಸ್ವಿ 9) ಕಾವೇರಿಯಿಂದು ಮೇಕಾಂಗಿಗೆ 10 ಏರಿಳಿತದ ದಾರಿಯಲ್ಲಿ ಮುಂತಾದವು.

ಇವರ ಸಾಧನೆಯ ಕುರಿತು ಹೇಳುತ್ತಾ ಹೋದರೆ ಪದಗಳೇ ಸಾಲದು. ಇಂದಿನ ಪ್ರತಿಯೊಂದು ಹೆಣ್ಣಿಗೆ ಸ್ಪೂರ್ತಿಯ ಶಕ್ತಿಯಾಗಿ, ಅವರ ಚಕಮಕ ಮಾತಿನಿಂದ ಧೈರ್ಯ ನೀಡುತ್ತಿರುವ ಇವರ ಸೇವೆಯೇ ಸ್ತುತ್ಯಾರ್ಹವಾಗಿದೆ ಎಂದರೆ ತಪ್ಪಾಗಲಾರದು.

ಶಿಲ್ಪಾ ಎಸ್. ಉಪಾಧ್ಯೆ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಎಡ್.)
ಶಿಕ್ಷಣ ಮಹಾವಿದ್ಯಾಲಯ, ನಣದಿ

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ




ಶಾಖೆಗಳು 81
ಠೇವು 349+ ಕೋಟಿ
ಸಾಲ 175+ ಕೋಟಿ
ಸದಸ್ಯರು 46+ ಸಾವಿರ
ಗುಣಿತಾವನಿಗಳು 127+ ಕೋಟಿ
ಲಾಭ 2024-25 01+ ಕೋಟಿ

## ಗುರು ಎಂದರೆ ಯಾರು?

ಗುರು ಎಂದರೆ
ಕರಮುಗಿವ ಮಂದಿರ, ಶಿರಬಾಗುವ ಸೌಜನ್ಯ ।
ಕಗ್ಗಲ್ಲು ಕೆತ್ತಿದ ಶಿಲ್ಪಿ, ಮಮತೆ ಬಿತ್ತಿದ ರೈತ ॥

ಗುರು ಎಂದರೆ
ನನ್ನ ನಾನಾಗಿಸಿದಾತ, ಆತ್ಮ ಉದ್ಧರಿಸಿದಾತ ।
ಹೃದಯಸಿರಿ ತಂದಾತ, ಮನ ಮಡಿ ಆಗಿಸಿದಾತ ॥

ಗುರು ಎಂದರೆ
ಮೌಲ್ಯ ಕಲಿಸಿದಾತ, ನೀತಿ ಭೋದಿಸಿದಾತ।
ತಪ್ಪು ತಿದ್ದಿದಾತ, ಒಪ್ಪಿ ಮುನ್ನಡೆಸಿದಾತ ॥

ಗುರು ಎಂದರೆ
ಬುದ್ಧಿಯ ವಿಧಾತ, ಸಿದ್ಧಿಯ ಪ್ರಧಾತ ।
ದೈವ ಗುಣದಾತ, ಮುಕ್ತಿಯ ಸುಧಾತ ॥

ಡಾ॥ ರವಿ ಈ ಕುರಬೇಟ
ಪ್ರಾಂಶುಪಾಲರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಎಡ್.)
ಶಿಕ್ಷಣ ಮಹಾವಿದ್ಯಾಲಯ, ನಣದಿ




ಕಲಬುರ್ಗಿಯಲ್ಲಿ ವಿಶೇಷ ಒಲಿಂಪಿಕ್ಸ್ ಭಾರತ– ಕರ್ನಾಟಕ ಮತ್ತು ಇಂದುಮತಿ ಚಾರಿಟೇಬಲ್ ಟ್ರಸ್ಟ್ ಇವರ ಸಹಯೋಗದಲ್ಲಿ ಯಾದಗಿರಿ ವಲಯ ಮಟ್ಟದ (ಬೀದರ, ಕಲಬುರ್ಗಿ, ಯಾದಗಿರಿ) ಇದರ ವಿಶೇಷ ಶಿಕ್ಷಕರ ತರಬೇತಿ ಕಾರ್ಯಾಗಾರ ಸಭೆಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಜಿ ಯವರು ಉದ್ಘಾಟಿಸಿದರು.




ನಿಪ್ಪಾಣಿಯಲ್ಲಿ ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ವಸತಿ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದ ಹೊಸ ಕಟ್ಟಡದ ಭೂಮಿ ಪೂಜೆಯನ್ನು ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಬಸವಜ್ಯೋತಿ ಯೂಥ್ ಫೌಂಡೇಶನ ಅಧ್ಯಕ್ಷ್ಯರಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರು ನೆರವೇರಿಸಿ ಚಾಲನೆ ನೀಡುತ್ತಿರುವುದು.




ನಿಪ್ಪಾಣಿ ನಗರದಲ್ಲಿ ಶ್ರೀ ಭಜರಂಗಬಲಿ ವಡ್ಡರ ಸಮಾಜ ಸೇವಾ ಸಂಘದ ಹತ್ತಿರ ಶಾಸಕರ ನಿಧಿಯಿಂದ 5 ಲಕ್ಷ ರೂಪಾಯಿ ಮೊತ್ತದಲ್ಲಿ ಸಮುದಾಯ ಭವನದ ಭೂಮಿ ಪೂಜೆಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ನೆರವೇರಿಸಿ ಚಾಲನೆ ನೀಡುತ್ತಿರುವ ದೃಶ್ಯ.




ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರು 1925 ರಲ್ಲಿ ನಿಪ್ಪಾಣಿಗೆ ಭೇಟಿ ನೀಡಿದ ಶಾಶ್ವತವಾಗಿ ನೆನಪಿಡಲು ಅಂಬೇಡ್ಕರ ಮ್ಯೂಸಿಯಂ ನಿರ್ಮಿಸುವ ಕುರಿತು ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಪ್ರವಾಸಿ ತಾಣದ ಕುರಿತು ಜೊಲ್ಲೆ ದಂಪತಿ ಯವರು ಸಭೆ ನಡೆಸಿ ಚರ್ಚಿಸುತ್ತಿರುವ ದೃಶ್ಯ.




ನಿಪ್ಪಾಣಿ ಮತಕ್ಷೇತ್ರದ ಅಕ್ಕೋಳ ಗ್ರಾಮದ ಶ್ರೀ ದತ್ತ ದೇವಸ್ಥಾನಕೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭೇಟಿ ನೀಡಿ ದೃಶ್ಯ.




ಬೆನಾಡಿ (ಮಂಗಾವತಿ ಮರಡಿ) ಗ್ರಾಮದಲ್ಲಿ 30 ಲಕ್ಷ ರೂ.ಮೊತ್ತದಲ್ಲಿ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕೊಠಡಿಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಉದ್ಘಾಟಿಸುತ್ತಿರುವುದು.




ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ್) ಮುಖ್ಯ ಕಚೇರಿಗೆ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಬಾಗಲಕೋಟನ ಸಿ.ಇ.ಓ ಶ್ರೀ. ಎಸ್. ಸಿ. ಮೊಟಗಿ ಹಾಗೂ ಸಿಬ್ಬಂದಿಗಳು ಸೌಹಾರ್ದಯುತವಾಗಿ ಭೇಟಿ ನೀಡಿದ ಸಂಧರ್ಭದಲ್ಲಿ ಅವರನ್ನು ಬಸವಜ್ಯೋತಿ ಯೂಥ್ ಫೌಂಡೇಶನ ಅಧ್ಯಕ್ಷ್ಯರಾದ ಶ್ರೀ. ಬಸವಪ್ರಸಾದ ಜೊಲ್ಲೆ ಸತ್ಕರಿಸುತ್ತಿರುವ ದೃಶ್ಯ.




ನಿಪ್ಪಾಣಿ ನಗರದಲ್ಲಿ ಜೊಲ್ಲೆ ಗ್ರೂಪ್ ಮತ್ತು ಪತಂಜಲಿ ಯೋಗ ಸಮಿತಿ ಸಹಯೋಗದಲ್ಲಿ ಪತಂಜಲಿ ವೃಕ್ಷಾರೋಪಣ ಮಾಸದ ಅಂಗವಾಗಿ "ಗಿಡಮೂಲಿಕೆ ವಿತರಣಾ" ('ಜಡಿ–ಬೂಟಿ') ದಿನಾಚರಣೆ ನಿಮಿತ್ಯ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಆಯುರ್ವೇದಿಕ್ ಸಸಿಗಳನ್ನು ನೆಟ್ಟು ಚಾಲನೆ ನೀಡುತ್ತಿರುವುದು.